# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 541 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11-03-2025 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಾವಣಗೆರೆ ಜಿಲ್ಲೆಯ ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿಗಳಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ತ್ಯಾಜ್ಯದ ಪ್ರಮಾಣವೆಷ್ಟು; | ದಾವಣಗೆರೆ ಜಿಲ್ಲೆಯ ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿಗಳಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ತ್ಯಾಜ್ಯದ ಪ್ರಮಾಣ ಈ ಕೆಳಕಂಡಂತಿದೆ. |

| ಕ್ರ ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ತ್ಯಾಜ್ಯ ಉತ್ಪಾದನೆಯ ಪ್ರಮಾಣ (TPD) |
|---|---|---|
| 1 | ಹರಿಹರ | 30.0 |
| 2 | ಚನ್ನಗಿರಿ | 9.0 |
| 3 | ಮಲೆಬೆನ್ನೂರು | 8.0 |
| 4 | ಹೊನ್ನಾಳಿ | 8.5 |
| 5 | ಜಗಳೂರು | 7.2 |
| 6 | ನ್ಯಾಮತಿ | 4.7 |
| | **ಒಟ್ಟು** | **67.4** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ತ್ಯಾಜ್ಯವನ್ನು ಜಿಲ್ಲೆಯ ಪ್ರತಿಯೊಂದು ನಗರಸಭೆ/ ಪುರಸಭೆ / ಪಟ್ಟಣ ಪಂಚಾಯಿತಿಗಳ ಸಂಸ್ಥೆಯು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಯಾವ ರೀತಿಯ ಸೂಕ್ತ ಕ್ರಮಗಳನ್ನು ಕೈಗೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ಈ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ನಿರ್ವಹಣೆ ನಿಯಮಗಳು – 2016 ಮತ್ತು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಧೀಕರಣ ನೀಡಿರುವ ನಿರ್ದೇಶನಗಳು ಹಾಗೂ ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಗಳ ಮಾರ್ಗಸೂಚಿಗಳನ್ವಯ ಪ್ರತಿದಿನ ಉತ್ಪತ್ತಿಯಾಗುವ ಪೌರ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಅಗತ್ಯ ಕ್ರಮ ವಹಿಸಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿವೆ.<br>1. **ಹರಿಹರ ನಗರಸಭೆ:** ಹರಿಹರ ನಗರಸಭೆಯಲ್ಲಿ ಪ್ರತಿನಿತ್ಯ ಸುಮಾರು 30 ಟನ್‌ನಷ್ಟು ಪೌರ ಘನತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಪಟ್ಟಣದ ಎಲ್ಲಾ ಮನೆಗಳಿಗೆ Dustbin ಗಳನ್ನು ನೀಡಲಾಗಿದ್ದು, ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಪ್ರತಿನಿತ್ಯ, ಮನೆ-ಮನೆಗಳಿಂದ ಪ್ರತ್ಯೇಕವಾಗಿ ಹಸಿಕಸ ಮತ್ತು ಒಣಕಸಗಳನ್ನು, 30 ಪುಷ್‌ಕಾರ್ಟ್‌ಗಳು ಮತ್ತು 14 ಆಟೋ ಟಿಪ್ಪರ್‌ಗಳ ಮೂಲಕ ಸಂಗ್ರಹಿಸಿ ಒಟ್ಟು 03 |

| | | |
|---|---|---|
| | | ಟ್ರ್ಯಾಕ್ಟರ್‌ಗಳ ಮೂಲಕ ಸಂಸ್ಕರಣಾ ಘಟಕಕ್ಕೆ ರವಾನೆ ಮಾಡಲಾಗುತ್ತಿದೆ.<br><br>ಹರಿಹರ ನಗರಸಭೆಗೆ ಘನತ್ಯಾಜ್ಯ ನಿರ್ವಹಣೆಗಾಗಿ ಒಟ್ಟು 14 ಎಕರೆ 23 ಗುಂಟೆ ಜಾಗವಿದ್ದು, ಸದರಿ ಜಾಗದಲ್ಲಿ ಅನುಮೋದಿತ DPR ನಂತೆ ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲಾಗಿದ್ದು ಇಲ್ಲಿ, ಪ್ರತಿನಿತ್ಯ 17 ಟನ್ ಹಸಿತ್ಯಾಜ್ಯವನ್ನು Windrow composting ಮತ್ತು Vermi composting ಮೂಲಕ ಸಂಸ್ಕರಿಸಿ, ಸುಮಾರು 2 ಟನ್ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಸುಮಾರು 11 ಟನ್ ಒಣತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿರುವ Dry Waste Collection Centre ನಲ್ಲಿ ಸಂಗ್ರಹಿಸಿಡಲಾಗುತ್ತಿದ್ದು ಅಧಿಕೃತ ಮರು ಬಳಕೆದಾರರಿಗೆ ಮಾರಾಟ ಮಾಡಲಾಗುತ್ತದೆ.<br><br>2. **ಚನ್ನಗಿರಿ ಪುರಸಭೆ:** ಚನ್ನಗಿರಿ ಪುರಸಭೆಯಲ್ಲಿ ಪ್ರತಿನಿತ್ಯ ಸುಮಾರು 9 ಟನ್‌ನಷ್ಟು ಪೌರ ಘನತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಪಟ್ಟಣದ ಎಲ್ಲಾ ಮನೆಗಳಿಗೆ Dustbin ಗಳನ್ನು ನೀಡಲಾಗಿದ್ದು, ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಪ್ರತಿನಿತ್ಯ, ಮನೆ-ಮನೆಗಳಿಂದ ಹಸಿಕಸ ಮತ್ತು ಒಣಕಸಗಳನ್ನು ಪ್ರತ್ಯೇಕವಾಗಿ 8 ಪುಷ್‌ಕಾರ್ಟ್‌ಗಳು ಮತ್ತು 4 ಸಂಖ್ಯೆ ಆಟೋಟಿಪ್ಪರ್‌ಗಳ ಮೂಲಕ ಸಂಗ್ರಹಿಸಿ ಒಟ್ಟು 03 ಸಂಖ್ಯೆ ಟ್ರಾಕ್ಟರ್‌ಗಳ ಮೂಲಕ ಸಂಸ್ಕರಣಾ ಘಟಕಕ್ಕೆ ಸಾಗಿಸಲಾಗುತ್ತಿದೆ.<br><br>ಚನ್ನಗಿರಿ ಪುರಸಭೆಗೆ ಘನತ್ಯಾಜ್ಯ ನಿರ್ವಹಣೆಗಾಗಿ ಒಟ್ಟು 4 ಎಕರೆ 23 ಗುಂಟೆ ಜಾಗವಿದ್ದು, ಸದರಿ ಜಾಗದಲ್ಲಿ DPR ಅನುಮೋದನೆಯಂತೆ ಮೂಲಸೌಕರ್ಯ ಅಭಿವೃದ್ಧಿಗೊಳಿಸಲಾಗಿದ್ದು ಇಲ್ಲಿ, ಪ್ರತಿನಿತ್ಯ 3 ಟನ್ ಹಸಿತ್ಯಾಜ್ಯವನ್ನು Vermi composting ಮೂಲಕ ಸಂಸ್ಕರಿಸಿ, ಸುಮಾರು 0.25 ಟನ್ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಸುಮಾರು 2.5 ಟನ್ ನಷ್ಟು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿರುವ Dry Waste Collection Centre ನಲ್ಲಿ ಸಂಗ್ರಹಿಸಿಡಲಾಗುತ್ತಿದ್ದು ಅಧಿಕೃತ ಮರು ಬಳಕೆದಾರರಿಗೆ ಮಾರಾಟ ಮಾಡಲಾಗುತ್ತದೆ. |

| | | |
|---|---|---|
| | | 3. **ಮಲೆಬೆನ್ನೂರು ಪುರಸಭೆ:** ಮಲೆಬೆನ್ನೂರು ಪುರಸಭೆಯಲ್ಲಿ ಪ್ರತಿನಿತ್ಯ ಸುಮಾರು 8 ಟನ್ ನಷ್ಟು ಪೌರ ಘನತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಪಟ್ಟಣದ ಎಲ್ಲಾ ಮನೆಗಳಿಗೆ Dustbin ಗಳನ್ನು ನೀಡಲಾಗಿದ್ದು, ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಪ್ರತಿನಿತ್ಯ, ಮನೆ-ಮನೆಗಳಿಂದ ಪ್ರತ್ಯೇಕವಾಗಿ, ಹಸಿಕಸ ಮತ್ತು ಒಣಕಸಗಳನ್ನು 5 ಸಂಖ್ಯೆ ಆಟೋಟಿಪ್ಪರ್‌ಗಳ ಮೂಲಕ ಸಂಗ್ರಹಿಸಿ ಒಟ್ಟು 02 ಸಂಖ್ಯೆ ಟ್ರಾಕ್ಟರ್‌ಗಳ ಮೂಲಕ ಸಂಸ್ಕರಣಾ ಘಟಕಕ್ಕೆ ರವಾನೆ ಮಾಡಲಾಗುತ್ತಿದೆ. |
| | | ಮಲೆಬೆನ್ನೂರು ಪುರಸಭೆಗೆ ಘನತ್ಯಾಜ್ಯ ನಿರ್ವಹಣೆಗಾಗಿ ಒಟ್ಟು 2 ಎಕರೆ 2 ಗುಂಟೆ ಜಾಗವಿದ್ದು, ಸದರಿ ಜಾಗದಲ್ಲಿ ಅನುಮೋದಿತ DPR ನಂತೆ ಮೂಲಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.<br><br>4. **ಹೊನ್ನಾಳಿ ಪುರಸಭೆ:** ಹೊನ್ನಾಳಿ ಪುರಸಭೆಯಲ್ಲಿ ಪ್ರತಿನಿತ್ಯ ಸುಮಾರು 8.5 ಟನ್‌ನಷ್ಟು ಪೌರ ಘನತ್ಯಾಜ್ಯ ವಸ್ತುಗಳು ಉತ್ಪಾದನೆಯಾಗುತ್ತಿದೆ. ಪಟ್ಟಣದ ಎಲ್ಲಾ ಮನೆಗಳಿಗೆ Dustbin ಗಳನ್ನು ನೀಡಲಾಗಿದ್ದು, ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಪ್ರತಿನಿತ್ಯ, ಮನೆ-ಮನೆಗಳಿಂದ ಪ್ರತ್ಯೇಕವಾಗಿ ಹಸಿಕಸ ಮತ್ತು ಒಣಕಸಗಳನ್ನು, 3 ಆಟೋಟಿಪ್ಪರ್‌ಗಳ ಮೂಲಕ ಸಂಗ್ರಹಿಸಿ 02 ಟ್ರಾಕ್ಟರ್‌ಗಳ ಮೂಲಕ ಸಂಸ್ಕರಣಾ ಘಟಕಕ್ಕೆ ರವಾನೆ ಮಾಡಲಾಗುತ್ತಿದೆ.<br><br>ಹೊನ್ನಾಳಿ ಪುರಸಭೆಗೆ ಘನತ್ಯಾಜ್ಯ ನಿರ್ವಹಣೆಗಾಗಿ ಒಟ್ಟು 10 ಎಕರೆ ಜಾಗವಿದ್ದು, ಸದರಿ ಜಾಗದಲ್ಲಿ DPR ಅನುಮೋದನೆಯಂತೆ ಮೂಲಸೌಕರ್ಯ ಅಭಿವೃದ್ಧಿಗೊಳಿಸಲಾಗಿದ್ದು ಇಲ್ಲಿ, ಪ್ರತಿನಿತ್ಯ 2.7 ಟನ್ ಹಸಿತ್ಯಾಜ್ಯವನ್ನು Vermi composting ಮೂಲಕ ಸಂಸ್ಕರಿಸಿ, ಸುಮಾರು 0.25 ಟನ್ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಸುಮಾರು 3 ಟನ್ ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿರುವ Dry Waste Collection Centre ನಲ್ಲಿ ಸಂಗ್ರಹಿಸಿಡಲಾಗುತ್ತಿದ್ದು ಅಧಿಕೃತ ಮರುಬಳಕೆದಾರರಿಗೆ ಮಾರಾಟ ಮಾಡಬೇಕಿರುತ್ತಿದೆ.<br><br>5. **ಜಗಳೂರು ಪಟ್ಟಣ ಪಂಚಾಯಿತಿ:** ಜಗಳೂರು ಪಟ್ಟಣ ಪಂಚಾಯಿತಿಯಲ್ಲಿ ಪ್ರತಿನಿತ್ಯ ಸುಮಾರು 7.2 ಟನ್‌ನಷ್ಟು ಪೌರ ಘನತ್ಯಾಜ್ಯ ಉತ್ಪಾದನೆಯಾಗುತ್ತಿದೆ. |

| | | |
|---|---|---|
| | | ಪಟ್ಟಣದ ಎಲ್ಲಾ ಮನೆಗಳಿಗೆ Dustbin ಗಳನ್ನು ನೀಡಲಾಗಿದ್ದು, ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ, ಪ್ರತಿನಿತ್ಯ, ಮನೆ-ಮನೆಗಳಿಂದ ಪ್ರತ್ಯೇಕವಾಗಿ ಹಸಿಕಸ ಮತ್ತು ಒಣಕಸಗಳನ್ನು, 5 ಸಂಖ್ಯೆ ಆಟೋಟಿಪ್ಪರ್‌ಗಳ ಮೂಲಕ ಸಂಗ್ರಹಿಸಿ ಒಟ್ಟು 03 ಟ್ರ್ಯಾಕ್ಟರ್‌ಗಳ ಮೂಲಕ ಸಂಸ್ಕರಣಾ ಘಟಕಕ್ಕೆ ರವಾನೆ ಮಾಡಲಾಗುತ್ತಿದೆ.<br><br>ಜಗಳೂರು ಪಟ್ಟಣ ಪಂಚಾಯಿತಿಗೆ ಘನತ್ಯಾಜ್ಯ ನಿರ್ವಹಣೆಗಾಗಿ ಒಟ್ಟು 5 ಎಕರೆ ಜಾಗವಿದ್ದು, ಸದರಿ ಜಾಗದಲ್ಲಿ DPR ಅನುಮೋದನೆಯಂತೆ ಮೂಲಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲಾಗಿದ್ದು ಇಲ್ಲಿ, ಪ್ರತಿನಿತ್ಯ 2 ಟನ್ ಹಸಿತ್ಯಾಜ್ಯವನ್ನು Windrow Composting ಮೂಲಕ ಸಂಸ್ಕರಿಸಿ, ಸುಮಾರು 0.25 ಟನ್ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಸುಮಾರು 4.8 ಟನ್ ಒಣತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿರುವ Dry Waste Collection Centre ನಲ್ಲಿ ಸಂಗ್ರಹಿಸಿಡಲಾಗುತ್ತಿದ್ದು ಅಧಿಕೃತ ಮರು ಬಳಕೆದಾರರಿಗೆ ಮಾರಾಟ ಮಾಡಲಾಗುತ್ತದೆ.<br><br>6. **ನ್ಯಾಮತಿ ಪಟ್ಟಣ ಪಂಚಾಯಿತಿ:** ನ್ಯಾಮತಿ ಪಟ್ಟಣ ಪಂಚಾಯಿತಿಯಲ್ಲಿ ಪ್ರತಿನಿತ್ಯ ಸುಮಾರು 4.7 ಟನ್ ನಷ್ಟು ಪೌರ ಘನತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಪಟ್ಟಣದ ಎಲ್ಲಾ ಮನೆಗಳಿಗೆ Dustbin ಗಳನ್ನು ನೀಡಲಾಗಿದ್ದು ,ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಪ್ರತಿನಿತ್ಯ, ಮನೆ-ಮನೆಗಳಿಂದ ಪ್ರತ್ಯೇಕವಾಗಿ ಹಸಿಕಸ ಮತ್ತು ಒಣಕಸಗಳನ್ನು 4 ಆಟೋ ಟಿಪ್ಪರ್‌ಗಳ ಮೂಲಕ ಸಂಗ್ರಹಿಸಿ ಒಟ್ಟು 02 ಸಂಖ್ಯೆ ಟ್ರ್ಯಾಕ್ಟರ್‌ಗಳ ಮೂಲಕ ಸಂಸ್ಕರಣಾ ಘಟಕಕ್ಕೆ ರವಾನೆ ಮಾಡಲಾಗುತ್ತಿದೆ.<br><br>ನ್ಯಾಮತಿ ಪಟ್ಟಣ ಪಂಚಾಯಿತಿಗೆ ಘನತ್ಯಾಜ್ಯ ನಿರ್ವಹಣೆಗಾಗಿ ಒಟ್ಟು 5 ಎಕರೆ ಜಾಗವಿದ್ದು, ಸದರಿ ಜಾಗದಲ್ಲಿ DPR ಅನುಮೋದನೆಯಂತೆ ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ |
| ಇ) | ದಾವಣಗೆರೆ ಜಿಲ್ಲೆಯಲ್ಲಿ ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡಲು ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; | ದಾವಣಗೆರೆ ಜಿಲ್ಲೆಯ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡಲು ಇರುವ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ. |

ಸದರಿಯವರಿಗೆ ನೀಡುತ್ತಿರುವ ವೇತನವೆಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

| ತಾಲ್ಲೂಕು | ನಗರ ಸ್ಥಳೀಯ ಸಂಸ್ಥೆಯ ಹೆಸರು | ಖಾಯಂ ಸಿಬ್ಬಂದಿ ಸಂಖ್ಯೆ | ಹೊರಗುತ್ತಿಗೆ ಮತ್ತು ನೇರ ಪಾವತಿ ಸಂಖ್ಯೆ | ಒಟ್ಟು |
|---|---|---|---|---|
| ಹರಿಹರ | ನಗರಸಭೆ, ಹರಿಹರ | 67 | 72 | 139 |
| | ಪುರಸಭೆ, ಮಲೆಬೆನ್ನೂರು | 17 | 3 | 20 |
| ಚನ್ನಗಿರಿ | ಪುರಸಭೆ, ಚನ್ನಗಿರಿ | 34 | 4 | 38 |
| ಹೊನ್ನಾಳಿ | ಪುರಸಭೆ, ಹೊನ್ನಾಳಿ | 24 | 11 | 35 |
| ಜಗಳೂರು | ಪ.ಪಂ., ಜಗಳೂರು | 31 | 10 | 41 |
| ನ್ಯಾಮತಿ | ಪ.ಪಂ. ನ್ಯಾಮತಿ | 10 | 6 | 16 |

- ಖಾಯಂ ಸಿಬ್ಬಂದಿಗಳಿಗೆ ಕೆ.ಸಿ.ಎಸ್.ಆರ್. ನಿಯಮಾವಳಿಯನ್ವಯ ಮತ್ತು ಸರ್ಕಾರದ ಆದೇಶದಂತೆ 7ನೇ ವೇತನ ಆಯೋಗದ ವೇತನ ಸೌಲಭ್ಯಗಳನ್ನು ನೀಡಲಾಗುತ್ತಿದೆ.
- ಪೌರಕಾರ್ಮಿಕರು / ಲೋಡರ್ಸ್‌ಗಳಿಗೆ ವೇತನ ಶ್ರೇಣಿ ರೂ. 27000-46675 ರಡಿ ವೇತನ ಪಾವತಿಸಲಾಗುತ್ತಿದ್ದು, ವಾಹನ ಚಾಲಕರಿಗೆ ವೇತನ ಶ್ರೇಣಿ ರೂ. 34100-67600 ರಡಿ, ಸ್ಯಾನಿಟರಿ ಸೂಪರ್‌ವೈಸರ್‌ಗಳಿಗೆ ವೇತನಶ್ರೇಣಿ ರೂ. 29600-52800 ರಡಿ ವೇತನ ನೀಡಲಾಗುತ್ತಿದೆ.
- ನೇರಪಾವತಿ ಪೌರಕಾರ್ಮಿಕರಿಗೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆ ನಿಗಧಿಪಡಿಸಿದ ಕನಿಷ್ಠ ವೇತನದಂತೆ ವೇತನ ಪಾವತಿಸಲಾಗುತ್ತಿದೆ. ಅದರಂತೆ ಪೌರಕಾರ್ಮಿಕರಿಗೆ ಹಾಗೂ ಲೋಡರ್ಸ್‌ಗಳಿಗೆ ರೂ.21706/-ಗಳನ್ನು ಹಾಗೂ ವಾಹನ ಚಾಲಕರಿಗೆ ರೂ.19367/-ಗಳನ್ನು ಮತ್ತು ಇತರೆ ಪಿ.ಎಫ್, ಇ.ಎಸ್.ಐ. ಸೌಲಭ್ಯಗಳನ್ನು ನೀಡಲಾಗುತ್ತಿದೆ.

(ಕಡತ ಸಂಖ್ಯೆ: ನಅಇ 56 ಸಿಎಸ್‌ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು